# ಪ್ರಹಸನ ಪ್ರಸಂಗ

ದೇವರು ನಮ್ಮೆಡೆಗೆ ಅನೇಕ ರೂಪದಲ್ಲಿ, ಅನೇಕ ರೀತಿಯಲ್ಲಿ ಬರುತ್ತಾನೆ. ಆದರೆ ಅದನ್ನು ಗುರುತಿಸುವ ಸಾಮರ್ಥ್ಯ ನಮಗಿರುವುದಿಲ್ಲ. ನಾವು ಯಾವುದೊ ಅತಿಪ್ರಾಕೃತ ಘಟನೆಯನ್ನು ನಿರೀಕ್ಷಿಸುತ್ತೇವೆ. ಸಾಮಾನ್ಯ ಆಗುಹೋಗುಗಳಲ್ಲಿ ದೇವರನ್ನು ಕಾಣುವ ಸಾಮರ್ಥ್ಯ ನಮಗಿರುವುದಿಲ್ಲ.

ಒಂದು ದೊಡ್ಡ ಪ್ರವಾಹ. ಎಲ್ಲರೂ ಮನೆಯನ್ನು ಖಾಲಿ ಮಾಡಿ ಸುರಕ್ಷಿತ ಸ್ಥಳಗಳಿಗೆ ಧಾವಿಸುತ್ತಿದ್ದಾರೆ. ಒಬ್ಬಳು ತುಂಬ ಧಾರ್ಮಿಕಳಾದ ಮುದುಕಿ ಮನೆಯಿಂದ ಕದಲಲೇ ಇಲ್ಲ. ಪೊಲೀಸರು ದೋಣಿಯಲ್ಲಿ ಬಂದು ಆಕೆಯನ್ನು ಕರೆದರು. ಅವಳು ಹೇಳಿದಳು:

'ಇಲ್ಲ, ನಾನು ಬರುವುದಿಲ್ಲ. ದೇವರು ನನಗೆ ಯಾವಾಗಲೂ ಸಹಾಯಕನಾಗಿದ್ದನು. ಈಗಲೂ ಅವನು ನನ್ನನ್ನು ರಕ್ಷಿಸುತ್ತಾನೆ ಎಂಬ ಭರವಸೆ ನನಗಿದೆ.'

ನೀರು ಮೇಲೇರತೊಡಗಿತು. ಅವಳು ಮನೆಯ ಮಹಡಿಯನ್ನು ಏರಿದಳು. ಆಗ ಇನ್ನೊಂದು ದೋಣಿ ಆಕೆಯ ರಕ್ಷಣೆಗೆ ಬಂತು. 'ಈಗಲಾದರೂ ದೋಣಿಯನ್ನು ಹತ್ತಿ. ಇಲ್ಲದಿದ್ದರೆ ನೀರಿನಲ್ಲಿ ಮುಳುಗಿಹೋಗುತ್ತೀರಿ' ಎಂದು ಪೊಲೀಸರು ಕೇಳಿಕೊಂಡರು.

'ಇಲ್ಲ, ದೇವರು ಹಿಂದೆಯೂ ಸಹಾಯ ಮಾಡಿದ್ದ. ಈಗಲೂ ಮಾಡುತ್ತಾನೆ' ಎಂದು ಹೇಳಿ ಅವಳು ದೋಣಿ ಏರಲು ನಿರಾಕರಿಸಿದಳು.

ನೀರು ಮತ್ತೂ ಏರಿತು. ಮುದುಕಿ ಈಗ ಮನೆಯ ಛಾವಣಿಯನ್ನು ಏರಿದಳು. ಈಗ ಒಂದು ಹೆಲಿಕಾಪ್ಟರ್ ಬಂತು. ಕ್ಯಾಪ್ಟನ್ ಕೂಗಿ ಹೇಳಿದ: 'ನೋಡಮ್ಮ, ನೀವು ನೀರಿನಲ್ಲಿ ಮುಳುಗಿ ಹೋಗುತ್ತೀರಿ. ಬೇಗ ಹೆಲಿಕಾಪ್ಟರ್ ಹತ್ತಿ.'

ಆ ಮುದುಕಿ ತನ್ನ ಹಟ ಬಿಡಲಿಲ್ಲ. 'ನನ್ನ ರಕ್ಷಣೆಗೆ ದೇವರಿದ್ದಾನೆ' ಎಂದು ಹೇಳಿ ಸುಮ್ಮನಿದ್ದಳು. ನೀರು ಮೇಲೆ ಏರುತ್ತ ಹೋಗಿ ಆ ಮುದುಕಿ ನೀರಿನಲ್ಲಿ ಮುಳುಗಿ ಸತ್ತುಹೋದಳು. ಪರಲೋಕಕ್ಕೆ ಹೋಗುವಾಗ ಅವಳು ದೇವರನ್ನು, 'ನೀನೇಕೆ ನನ್ನನ್ನು ರಕ್ಷಿಸಲಿಲ್ಲ?' ಎಂದು ಕೇಳಿದಳು.

'ನಾನು ನಿನ್ನನ್ನು ರಕ್ಷಿಸಲು ಎರಡು ದೋಣಿ ಮತ್ತು ಒಂದು ಹೆಲಿಕಾಪ್ಟರ್ ಕಳಿಸಿದೆ!' ಎಂದು ದೇವರು ಉತ್ತರಿಸಿದ.

* * * * * * * * * * * * *

ಆಧ್ಯಾತ್ಮಿಕ ಹಿನ್ನೆಲೆಯಿಲ್ಲದಿದ್ದರೆ ಧರ್ಮಾಚರಣೆ ಕೇಲವ ಆಚರಣೆಯಾಗಿಯೆ ಉಳಿಯುತ್ತದೆ, ಅದರಿಂದ ಜೀವನ ಪರಿವರ್ತನೆಯುಂಟಾಗುವುದಿಲ್ಲ. ಕೆಲವರಿಗೆ ಪುರಾಣ ಶ್ರವಣ, ಆಧ್ಯಾತ್ಮಿಕ ಪ್ರವಚನ ಕೇಳುವುದು ಇತ್ಯಾದಿ ಒಂದು ದೈನಂದಿನ ಅಥವಾ ಸಾಪ್ತಾಹಿಕ ಪದ್ಧತಿ. ಅನೇಕರು ಶ್ರವಣದ ಕೆಲಸವನ್ನು ಕಿವಿಗೇ ಬಿಟ್ಟು, ತಾವು ಬೇರೇನೊ ಚಿಂತಿಸುತ್ತಿರುತ್ತಾರೆ, ಇಲ್ಲವೆ ನಿದ್ದೆ ಮಾಡುತ್ತಾರೆ. ಆದರೆ ಆ ಪದ್ಧತಿಯನ್ನು ನಿಲ್ಲಿಸುವಂತಿಲ್ಲ—ಅದೊಂದು ಫಲಾಪೇಕ್ಷೆಯಿಲ್ಲದ ನಿಷ್ಕಾಮ ಕರ್ಮ!

ಒಂದು ದೇವಾಲಯದಲ್ಲಿ ಪಂಡಿತರೊಬ್ಬರು ಪುರಾಣ ಪಠಣ ಮಾಡುತ್ತಿದ್ದರು. ಅನೇಕ ಮುದುಕ ಮುದುಕಿಯರು ಹೋಗಿ ಒಂದೊಂದು ಕಂಬಕ್ಕೆ ಒರಗಿಕೊಂಡು ಕುಳಿತು ಕೇಳುತ್ತಿದ್ದರು (ಅವರಲ್ಲೂ ಕಿವಿ ಕೇಳುವವರು). ಅವರಲ್ಲಿ ಒಬ್ಬರು ನಿದ್ದೆ ಮಾಡುವುದು ಮಾತ್ರವಲ್ಲದೆ ಗೊರಕೆಯನ್ನೂ ಹೊಡೆಯುತ್ತಿದ್ದರು. ಪಕ್ಕದಲ್ಲಿ ಅವರ ಮೊಮ್ಮಗ ಕುಳಿತಿರುತ್ತಿದ್ದ—ಬಹುಶಃ ಪುರಾಣ ಪಠಣ ಮುಗಿದಮೇಲೆ ಎಬ್ಬಿಸುವುದಕ್ಕೆ.

ಒಂದು ದಿನ ಪಂಡಿತರು ಆ ಹುಡುಗನನ್ನು ಕರೆದು ಹೇಳಿದರು: 'ನೋಡು, ನಿನ್ನ ಅಜ್ಜ ಪಠಣದ ಸಮಯದಲ್ಲಿ ನಿದ್ದೆ ಮಾಡದಂತೆ ನೋಡಿಕೊಂಡರೆ ನಿನಗೆ ಎಂಟಾಣೆ ಕೊಡುತ್ತೇನೆ.' ಹುಡುಗ ಒಪ್ಪಿದ. ಮರುದಿನದಿಂದ ಅವರ ನಿದ್ದೆ ಮತ್ತು ಗೊರಕೆಯ ಕಾಟ ತಪ್ಪಿತು. ಪಂಡಿತರು ಬಹಳ ಉತ್ಸಾಹದಿಂದ ಪಠಣ ಮಾಡುತ್ತಿದ್ದರು.

ಆದರೆ ಕೆಲವು ದಿನಗಳಾದ ನಂತರ ಮತ್ತೆ ಗೊರಕೆಯ ಧ್ವನಿ ಕೇಳಿಸತೊಡಗಿತು. ಪಂಡಿತರು ಹುಡುಗನನ್ನು ಕರೆದು ವಿಚಾರಿಸಿದರು 'ಏನು ಸಮಾಚಾರ' ಎಂದು. ಅವನೆಂದ : 'ಅಜ್ಜ ಹೇಳಿದ, "ನೀನು ನನ್ನನ್ನು ನಿದ್ದೆಯಿಂದ ಎಬ್ಬಿಸದೆ ಇದ್ದರೆ ಒಂದು ರೂಪಾಯಿ ಕೊಡುತ್ತೇನೆ" ಎಂದು.'

* * * * * * * * * * * * *

ಇಂದಿನ ವೇಗದ ಯುಗದಲ್ಲಿ ನಮ್ಮ ಬಗ್ಗೆ ಚಿಂತಿಸಲು ನಮಗೆ ಸಮಯವೇ ಇಲ್ಲ. ನಮ್ಮ ಜೀವನ ಗೊತ್ತು ಗುರಿ ಇಲ್ಲದೆ ಎಲ್ಲೆಂದರಲ್ಲಿಗೆ ಧಾವಿಸುತ್ತಿದೆ. ಸರಿ ತಪ್ಪುಗಳ ಬಗ್ಗೆಯಾಗಲಿ, ಹಿತ ಅಹಿತಗಳ ಬಗ್ಗೆಯಾಗಲಿ ಚಿಂತಿಸುವುದಕ್ಕೆ ತಾಳ್ಮೆಯೇ ಇಲ್ಲ—ಕಾಲಪ್ರವಾಹದಲ್ಲಿ ನಾವು ಕೊಚ್ಚಿಕೊಂಡು ಹೋಗುತ್ತಿದ್ದೇವೆ.

ವ್ಯಕ್ತಿಯೊಬ್ಬನು ಕುದುರೆಯ ಮೇಲೆ ಕುಳಿತು ಹೋಗುತ್ತಿದ್ದ. ಕುದುರೆ ಅವನ ಹತೋಟಿಯನ್ನು ಮೀರಿ ಓಡತೊಡಗಿತು. ಅವನ ಯಾವ ಪ್ರಯತ್ನವೂ ನಡೆಯಲಿಲ್ಲ. ಕುದುರೆ ನಾಗಾಲೋಟದಲ್ಲಿ ಓಡುತ್ತಿದೆ. ದಾರಿಹೋಕನೊಬ್ಬನು ಈ ವ್ಯಕ್ತಿಯನ್ನು ಗಟ್ಟಿಯಾಗಿ ಕೇಳಿದ, 'ಎಲ್ಲಿಗೆ ಹೋಗುತ್ತಿದ್ದೀಯ?' ಎಂದ. ಇವನು ಹೇಳಿದ, 'ನನಗೆ ತಿಳಿಯದು, ಈ ಕುದುರೆಯನ್ನೇ ಕೇಳು' ಎಂದು.